## 2 ನೇ ಹೆಚ್ಚುವರಿ ಪ್ರಥಮ ದರ್ಜೆಯ  ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ನಂಜನಗೂಡು

**ಸಿ.ಸಿ 684–2013** **ಸಿ. ಡಬ್ಲ್ಯುಃ 16**

**ಪಿ. ಡಬ್ಲ್ಯುಃ 11**

| | |
|---|---|
| ಸಾಕ್ಷಿದಾರರ ಹೆಸರು<br>ತಂದೆ/ಗಂಡನ ಹೆಸರು<br>ವಯಸ್ಸು<br>ಕೆಲಸ<br>ವಾಸ | ಉಸ್ಮಾನ್<br>ನಜೀರ್ ಮಹಮದ್<br>28 ವರ್ಷ<br>ಚಾಲಕ<br>ನಂಜನಗೂಡು. |
| | **ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕ 03–06–2026** |

**ಮುಖ್ಯ ವಿಚಾರಣೆಃ  ಶ್ರೀ. ಎಪಿಪಿ  ವಕೀಲರಿಂದಃ**

ಸಾಕ್ಷಿಗೆ ಈಗಾಗಲೇ ಗುರುತಿಸಿರುವ ನಿಪಿ–4 ನ್ನು ತೋರಿಸಿ ಅದರಲ್ಲಿ ಇರುವ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ–4(ಡಿ) ಎಂದು ಗುರುತಿಸಲಾಯಿತು.

ನಿಪಿ–4 ಕ್ಕೆ 15 ವರ್ಷಗಳ ಹಿಂದೆ ಪೋಲೀಸರ ಕೋರಿಕೆಯ ಮೇರೆಗೆ ಸಹಿ ಮಾಡಿರುತ್ತೇನೆ ಪೋಲೀಸರು ನನ್ನ ಸಮಕ್ಷಮ ಯಾವುದೇ ಮಹಜರು ಕ್ರಮ ಜರುಗಿಸಿ ಮತ್ತು ಯಾವುದೇ ದಾಖಲೆಗಳನ್ನು ಅಮಾನತ್ತು ಪಡಿಸಿಕೊಂಡಿರುವುದಿಲ್ಲ. ನಿಪಿ–4 ರಲ್ಲಿ ಏನು ಬರೆದಿದೆ ಎಂಬುದು ಗೊತ್ತಿಲ್ಲ. ಮತ್ತು ಈ ಪ್ರಕರಣದ ವಿದ್ಯಾಮಾನ ನನಗೆ ಗೊತ್ತಿಲ್ಲ.

(ಸಸಅ ಅವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿಸಲು ಅನುಮತಿಯನ್ನು ಕೋರಿದ್ದು ಅನುಮತಿಯನ್ನು ನೀಡಲಾಯಿತು)

**ಪಾಟೀ ಸವಾಲುಃ ಶ್ರೀ. ಎಪಿಪಿ ಯವರಿಂದ**

ದಿಃ 10-10-2011 ರಂದು ಪೋಲೀಸರು ನನ್ನನ್ನು ಮತ್ತು ಚಾಸಾ-2 ಮತ್ತು 11 ರವರನ್ನು ಬರಮಾಡಿಕೊಂಡು ಈ ಕೇಸಿನ ವಿದ್ಯಾಮಾನ ತಿಳಿಸಿ ಪಂಚರಾಗಲು ಕೋರಿಕೊಂಡರು ಎಂದರೆ ಸರಿ. ಅದಕ್ಕೆ ನಾವು ಒಪ್ಪಿದ ಮೇರೆಗೆ ಚಾಸಾ-2 ರವರು ಚಾಸಾ-1 ಮತ್ತು 1 ನೇ ಆರೋಪಿ ಗೆ ಸಂಬಂದಿಸಿದ ಮದುವೆ ಲಗ್ನ ಪತ್ರಿಕೆ , ಮದುವೆ ಪ್ರಮಾಣ ಪತ್ರ ಮತ್ತು ಮದುವೆ ಪೊಟೋಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಸಂಜೆ 7-15 ರಿಂದ 7-45 ಗಂಟೆಯವರಗೆ ಅಮಾನತ್ತು ಮಹಜರು ಕ್ರಮ ಜರುಗಿಸಿ ಮುಂದಿನ ಕ್ರಮಕ್ಕಾಗಿ ಅಮಾನತ್ತು ಪಡಿಸಿಕೊಂಡರು ಎಂದರೆ ಸರಿಯಲ್ಲ. ಸ್ಥಳದಲ್ಲಿ ನನ್ನ ಮತ್ತು ಚಾಸಾ-2 ಮತ್ತು 11 ರವರ ಸಹಿ ಪಡೆದುಕೊಂಡರು ಎಂದರೆ ಸರಿಯಲ್ಲ. ನಿಪಿ-4 ರಲ್ಲಿ ಬರೆದಿರುವ ವಿಚಾರ ಗೊತ್ತಿದ್ದರು ಸಹ ಆರೋಪಿತರು ನನಗೆ ಪರಿಚಯಸ್ಥರಾದ ಆಗಿರುವ ಕಾರಣ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**2 ನೇ ಕಿ.ಪ್ರ.ದ. ನ್ಯಾ ದಂ. ನಂಜನಗೂಡು**